2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 110/2021

| | | |
|---|---|---|
| ಸಾಕ್ಷಿದಾರರ ಹೆಸರು | - ಚಂದ್ರಮ್ಮ | ಪಿಡಬ್ಲೂ -3 |
| ಗಂಡನ ಹೆಸರು | - ಶಿವಣ್ಣ | ಸಿಡಬ್ಲೂ -4 |
| ವಯಸ್ಸು | - 50 ವರ್ಷ | |
| ಉದ್ಯೋಗ | - ಕೂಲಿ | |
| ವಾಸ ಸ್ಥಳ | - ಬೀರೂರು. | |

ದಿನಾಂಕಃ 16.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ನನಗೆ ಗೊತ್ತು, ಆತ ನಮ್ಮ ಹೊಲದ ಪಕ್ಕದ ಹೊಲದವರು. ಫ್ರಾಸಾ.1 ಮತ್ತು 2 ಗೊತ್ತು, ಅವರು ನನ್ನ ಮಕ್ಕಳು. ಚಾಸಾ.3 ನನ್ನ ನಾದಿನಿ. ಚಾಸಾ.7 ರವರು ಚಾಸಾ.3 ರವರ ಮಗ. ಚಾಸಾ.5 ಮತ್ತು 6 ಗೊತ್ತು.

2. ಬೀರೂರು ಕಾವಲ್ ನಲ್ಲಿ ನಮಗೆ ಸೇರಿದ 1 ಎಕರೆ 39 ಗುಂಟೆ ಜಮೀನು ಇದೆ. ಅದು ನನ್ನ ಹೆಸರಿನಲ್ಲಿ ಇದೆ. ಈಗ್ಗೆ ಮೂರುವರೆ ವರ್ಷಗಳ ಹಿಂದೆ ಒಂದು ದಿನ ಟ್ರಾಕ್ಟರ್ ನ್ನು ತೆಗೆದುಕೊಂಡು ನಾನು, ನನ್ನ ಮಕ್ಕಳಾದ ಫ್ರಾಸಾ.1, ಫ್ರಾಸಾ.2 , ಚಾಸಾ.3, ಚಾಸಾ.7 ರವರನ್ನು ಕರೆದುಕೊಂಡು ನಮ್ಮ ಜಮೀನಿಗೆ ಹೋಗಿದ್ದೆವು. ಚಾಸಾ.5 ರವರು ಟ್ರಾಕ್ಟರ್ ನ್ನು ಚಾಲನೆ ಮಾಡಲು ಬಂದಿದ್ದರು. ನಾವು ಅಲ್ಲಿಗೆ ಹೋಗಿ ಟ್ರಾಕ್ಟರ್ ನಿಂದ ಜಮೀನನ್ನು ಉಳುಮೆ ಮಾಡಿಸುತ್ತಿದ್ದಾಗ ಆರೋಪಿ ಮತ್ತು ಆತನ ಅಣ್ಣನಾದ ಪ್ರಕಾಶ್ ಅಲ್ಲಿಗೆ ಬಂದು ನಮ್ಮ ಪಕ್ಕದ

ಹೊಲವನ್ನು ನೀವು ಉಳುಮೆಮಾಡುವಂತಿಲ್ಲ ಅದು ನಮಗೆ ಬೇಕು ಎಂದು ಕೇಳಿದರು. ಆಗ ನಾವು ನಮ್ಮ ಅತ್ತೆಯವರ ಕಾಲದಿಂದಲೂ ಸದರಿ ಜಮೀನನ್ನು ನಾವೇ ಉಳುಮೆ ಮಾಡಿಕೊಂಡು ಬಂದಿದ್ದೇವೆ ನಾವು ಹೊಸದಾಗಿ ಉಳುಮೆ ಮಾಡುತ್ತಿಲ್ಲ ಎಂದು ಹೇಳಿದೆನು. ಆಗ ಯಾಕೆ ತಕರಾರು ಮಾಡುತ್ತೀಯ ಎಂದು ಚಾಸಾ.3 ರವರು ಕೇಳಿದಾಗ ಆರೋಪಿ ಕೈಯಿಂದ ಚಾಸಾ.3 ರವರ ಕೆನ್ನೆಗೆ ಹೊಡೆದು ದೂಕಿದನು. ನಂತರ ಆರೋಪಿ ಚಾಸಾ.3 ರವರನ್ನು ಎಳೆದಾಡಿ ಅವರ ಜಾಕೀಟನ್ನು ಹರಿದು ಹಾಕಿದನು. ಆರೋಪಿ ಅಡಿಕೆ ದಬ್ಬೆಯಿಂದ ಚಾಸಾ.3 ರವರ ಬಲಗೈಗೆ ಹೊಡೆದನು. ನಂತರ ಫ್ರಾಸಾ.1 ರವರು ಆರೋಪಿಯನ್ನು ತಡೆಯಲು ಹೋದಾಗ ಆರೋಪಿ ಅಡಿಕೆ ದಬ್ಬೆಯಿಂದ ಫ್ರಾಸಾ.1 ರವರ ಎಡಗಣ್ಣಿನ ಹತ್ತಿರ ಹೊಡೆದನು. ಆಗ ಫ್ರಾಸಾ.1 ರವರಿಗೆ ರಕ್ತಗಾಯವಾಗಿ ಅವರ ಶರ್ಟ್ ಗೆ ರಕ್ತವಾಯಿತು. ನಂತರ ಫ್ರಾಸಾ.2 ರವರು ಬಿಡಿಸಲು ಬಂದಾಗ ಆರೋಪಿ ಅವರಿಗೆ ದಬ್ಬೆಯಿಂದ ಅವರ ಎಡಕೈಗೆ ಹೊಡೆದನು. ನಂತರ ಆರೋಪಿ ತಂತಿಯನ್ನು ಅಡಿಕೆ ದಬ್ಬೆಗೆ ಸುತ್ತಿಕೊಂಡು ಫ್ರಾಸಾ.2 ರವರ ತಲೆಯ ಹಿಂಭಾಗಕ್ಕೆ ಹೊಡೆದನು. ಆಗ ಫ್ರಾಸಾ.2 ರವರಿಗೆ ರಕ್ತಗಾಯವಾಗಿ ತುಂಬಾ ರಕ್ತ ಹೋಯಿತು. ನಾನು ಬಿಡಿಸಲು ಹೋದಾಗ ಆರೋಪಿ ನನ್ನನ್ನು ಜಾಡಿಸಿ ದೂಕಿದನು. ನಾನು ಕೆಳಗೆ ಬಿದ್ದೆನು. ಆಗ ನನ್ನ ಸೊಂಟದ ಭಾಗಕ್ಕೆ ಪೆಟ್ಟಾಯಿತು. ನಂತರ ಚಾಸಾ.5 ಮತ್ತು 7 ರವರು ನನ್ನನ್ನು, ಫ್ರಾಸಾ.1, ಫ್ರಾಸಾ.2 ಮತ್ತು ಚಾಸಾ.3 ರವರನ್ನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ

ಕರೆದುಕೊಂಡು ಹೋದರು. ಅಲ್ಲಿ ನಾವು ಚಿಕಿತ್ಸೆ ಪಡೆದುಕೊಂಡೆವು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಫ್ರಾಸಾ.2 ರವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.

3. ಮೇಲೆ ಹೇಳಿದಂತೆ ಗಲಾಟೆಯಾದ ಸ್ಥಳವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಮೇಲೆ ಹೇಳಿದಂತೆ ಗಲಾಟೆ ನಡೆದ ಸ್ಥಳ ಕಂಡು ಬರುವುದಾಗಿ ಮತ್ತು ಅದು ನಮಗೆ ಸೇರಿದ ಜಮೀನು ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ.4 ಮತ್ತು 5 ಎಂದು ಗುರುತಿಸಲಾಗಿರುತ್ತದೆ.

4. ಆ ದಿನ ಆರೋಪಿ ಫ್ರಾಸಾ.1,2 ಮತ್ತು ಚಾಸಾ.3 ರವರಿಗೆ ಹೊಡೆದ ಅಡಿಕೆ ದಬ್ಬೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ದಬ್ಬೆಯನ್ನು ನೋಡಿ ಆರೋಪಿಯು ಸದರಿಯವರಿಗೆ ಹೊಡೆಯಲು ಬಳಸಿದ ದಬ್ಬೆ ಅದೇ ಎಂದು ನುಡಿದಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಲು ಹೋದಾಗ ಫ್ರಾಸಾ.1 ರವರು ನಾನೇ ಮಾಹಿತಿಯನ್ನು ನೀಡುತ್ತೇನೆ ಎಂದು ಹೇಳಿರುತ್ತಾರೆ ಹಾಗಾಗಿ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

5. ದಿ.16.05.2020 ರಂದು ನೀವು ಘಟನೆಯ ಬಗ್ಗೆ ಬೀರೂರು ಪೋಲೀಸರಿಗೆ ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸರಿ. ಸದರಿ ಹೇಳಿಕೆಯಲ್ಲಿ ನಮ್ಮ ಜಮೀನಿನಲ್ಲಿ ಸುಮಾರು 1 ಎಕರೆಯಷ್ಟು ಜಮೀನನ್ನು ಆರೋಪಿ ಮತ್ತು ಆತನ ಅಣ್ಣನಾದ ಪ್ರಕಾಶ್ ರವರು ಒತ್ತುವರಿ ಮಾಡಿಕೊಂಡಿರುವುದಾಗಿ ಮತ್ತು ಅದೇ ವಿಚಾರವಾಗಿ ನಾವುಗಳು ಕೊರ್ಟನಲ್ಲಿ ಕೇಸುಗಳನ್ನು ಹಾಕಿರುತ್ತೇವೆ ಎಂದು ತಿಳಿಸಿದ್ದೇನೆ ಎಂದರೆ ಸರಿ. ದಿ.14.05.2020 ರಂದು ಚಾಸಾ.3 ರವರು ಚಾಸಾ.5 ರವರ ಟ್ರಾಕ್ಟರ್ ನ್ನು ಬಾಡಿಗೆಗೆ ಪಡೆದುಕೊಂಡು ನಮ್ಮ ಜಮೀನಿನಲ್ಲಿ ಉಳುಮೆ ಮಾಡಿಸಿದ್ದು ಆಗ ಡೀಸೆಲ್ ಖಾಲಿಯಾಗಿದ್ದರಿಂದ  ಪೂರ್ತಿ ಜಮೀನನ್ನು ಉಳುಮೆ ಮಾಡಲು ಸಾಧ್ಯವಾಗಿರಲಿಲ್ಲ ಎಂದು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿದ ಘಟನೆ ದಿ.15.05.2020 ರಂದು ಬೆಳಿಗ್ಗೆ 9.30 ಗಂಟೆಗೆ ನಡೆದಿದೆ ಎಂದು  ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸರಿ.

6. ಗಲಾಟೆಯ ಸಮಯದಲ್ಲಿ ಆರೋಪಿ ಚಾಸಾ.3 ರವರನ್ನು ಕುರಿತು ಏಕೆ ಸೂಳೆ ಮುಂಡೆ ಈ ಜಮೀನಿನ ಹತ್ತಿರ ಏಕೆ ಬಂದಿದ್ದೀಯಾ ಬೇವರ್ಸಿಮುಂಡೆ ಎಂದು ಬೈಯ್ದುನು ಎಂದು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸರಿ.  ಅದೇ ರೀತಿ ಆರೋಪಿ ಫ್ರಾಸಾ.1 ರವರನ್ನು ಕುರಿತು ಸೂಳೇಮಗನೇ ಬೋಳಿ ಮಗನೇ ನಿನ್ನನ್ನು ಇಲ್ಲಿಯೇ ಮುಗಿಸುತ್ತೇನೆ ಎಂದು ಹೇಳಿದ್ದಾಗಿ ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸರಿ.  ಆರೋಪಿ ಫ್ರಾಸಾ.2 ರವರನ್ನು ಕುರಿತು ಸೂಾಳೆಮಕ್ಕಳಾ ಈ ದಿನ ನಿಮ್ಮನ್ನು ಯಾವುದೇ ಕಾರಣಕ್ಕೂ ಉಳಿಸುವುದಿಲ್ಲ ಜಮೀನಿನಲ್ಲಿ ಸಾಯಿಸಿ ಹೂತು ಹಾಕುತ್ತೇನೆಂದು ಹೇಳಿ ಕೊಲೆ ಮಾಡುವ ಉದ್ದೇಶದಿಂದ ಅಡಿಕೆ ದಬ್ಬೆಯಿಂದ ಆತನ ತಲೆಯ

ಹಿಂಭಾಗಕ್ಕೆ ಮತ್ತು ಎಡಗೈಗೆ ಬಲವಾಗಿ ಹೊಡೆದು ರಕ್ತಗಾಯ ಪಡಿಸಿದ್ದಾಗಿ ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸರಿ.

**(ಪಾಟೀ ಸವಾಲು: ಆರೋಪಿ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ಈ ಹಿಂದೆ ಪುರಸ್ಕರಿಸಿರುವ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ